# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1146 |
| ಸದಸ್ಯರ ಹೆಸರು | ಶ್ರೀ ಶರಣಗೌಡ ಬಯ್ಯಾಪುರ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 28.12.2022 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಎಷ್ಟು ಕಂದಾಯ ಗ್ರಾಮಗಳಿವೆ; | ರಾಯಚೂರು ಜಿಲ್ಲೆಯಲ್ಲಿ 884 (91 ಬೇಚರಾಕ್ ಗ್ರಾಮಗಳನ್ನೂ ಒಳಗೊಂಡಂತೆ) ಕಂದಾಯ ಗ್ರಾಮಗಳು ಮತ್ತು ಕೊಪ್ಪಳ ಜಿಲ್ಲೆಯಲ್ಲಿ 595 ಕಂದಾಯ ಗ್ರಾಮಗಳಿವೆ. |
| ಆ) | ಇವುಗಳಲ್ಲಿ ಎಷ್ಟು ಗ್ರಾಮಗಳಿಗೆ ಸ್ಮಶಾನದ ಉದ್ದೇಶಕ್ಕೆ ಜಾಗ ಮೀಸಲಿಟ್ಟಿದೆ; | **ರಾಯಚೂರು:**<br>ರಾಯಚೂರು ಜಿಲ್ಲೆಯಲ್ಲಿ ಒಟ್ಟು 754 ಗ್ರಾಮಗಳಿಗೆ ಸ್ಮಶಾನ ಸೌಲಭ್ಯ ಕಲ್ಪಿಸಲಾಗಿರುತ್ತದೆ.<br>**ಕೊಪ್ಪಳ:**<br>ಕೊಪ್ಪಳ ಜಿಲ್ಲೆಯಲ್ಲಿ ಒಟ್ಟು 595 ಗ್ರಾಮಗಳ ಪೈಕಿ 587 ಗ್ರಾಮಗಳಲ್ಲಿ ಸ್ಮಶಾನ ಉದ್ದೇಶಕ್ಕಾಗಿ ಜಮೀನನ್ನು ಮೀಸಲಿಟ್ಟಿರುತ್ತದೆ. |
| ಇ) | ಇವುಗಳಲ್ಲಿ ಸ್ಮಶಾನವಿಲ್ಲದ ಗ್ರಾಮಗಳೆಷ್ಟು? | **ರಾಯಚೂರು:**<br>ರಾಯಚೂರು ಜಿಲ್ಲೆಯಲ್ಲಿ 39 ಗ್ರಾಮಗಳಿಗೆ ಸ್ಮಶಾನ ಭೂಮಿ ಲಭ್ಯವಿರುವುದಿಲ್ಲ.<br>**ಕೊಪ್ಪಳ:**<br>ಕೊಪ್ಪಳ ಜಿಲ್ಲೆಯಲ್ಲಿ ಒಟ್ಟು 595 ಗ್ರಾಮಗಳ ಪೈಕಿ 8 ಗ್ರಾಮಗಳಿಗೆ ಸ್ಮಶಾನ ಭೂಮಿ ಲಭ್ಯವಿರುವುದಿಲ್ಲ. |
| ಈ) | ಪ್ರತಿ ಗ್ರಾಮಗಳಲ್ಲಿ ಸ್ಮಶಾನಗಳಿಗಾಗಿ ಜಾಗ ಕಾಯ್ದಿರಿಸಲು ಕೈಗೊಂಡ ಕ್ರಮಗಳೇನು? | **ರಾಯಚೂರು:**<br>ರಾಯಚೂರು ಜಿಲ್ಲೆಯಲ್ಲಿ ಬಾಕಿ ಉಳಿದ 39 ಗ್ರಾಮಗಳಿಗೆ ಸರ್ಕಾರಿ ಜಮೀನು ಲಭ್ಯವಿಲ್ಲದ ಕಾರಣ ಹಾಗೂ ಪಟ್ಟಾ ಜಮೀನಿನ ಭೂಮಾಲಿಕರು ಸ್ಮಶಾನಕ್ಕಾಗಿ ಜಾಗ ನೀಡಲು ಒಪ್ಪದಿರುವ ಕಾರಣ, ಸದರಿ ಗ್ರಾಮಗಳಲ್ಲಿ ಖಾಸಗಿ ಜಮೀನು ಖರೀದಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ.<br>**ಕೊಪ್ಪಳ**<br>ಸರ್ಕಾರಿ ಜಮೀನು ಲಭ್ಯವಿಲ್ಲದ ಕಡೆ ಖಾಸಗಿ ಜಮೀನನ್ನು ಖರೀದಿಸುವ ಪ್ರಕ್ರಿಯೆ ಪರಿಶೀಲನೆಯಲ್ಲಿದೆ. |

**ಸಂಖ್ಯೆ: ಕಂಇ 91 ಎಲ್‌ಆರ್‌ಡಿ 2022**

(ಆರ್. ಅಶೋಕ)
ಕಂದಾಯ ಸಚಿವರು